ಅಧ್ಯಕ್ಷರು.—ಇಲ್ಲ, ನೀವು ಹೇಳುವುದು ರೆಕಾರ್ಡಿಗೆ ಹೋಗುವುದಿಲ್ಲ.

ಶ್ರೀ ಆರ್. ಎನ್. ನಾಯಕ್.—ಸರ್ಕಾರೀ ಜಮೀನು ಇಲ್ಲದೇ ಹೋದರೆ, ಶವ ಸಂಸ್ಕಾರವನ್ನು ಎಲ್ಲಿ ಮಾಡಬೇಕು? ಅದನ್ನಾದರೂ ಸರ್ಕಾರದವರು ಹೇಳಲಿ.?

(ಉತ್ತರ ಇಲ್ಲ.)

ಕಂದಾಯ ಇಲಾಖೆಯ ಭೂಮಿಯನ್ನು ಅನಧಿಕೃತವಾಗಿ ಬೇಸಾಯ ಮಾಡುತ್ತಿರುವ ಬಗ್ಗೆ

೮೩ (೫೪೩ ಉ) ಶ್ರೀ ಪಿ. ಎಸ್. ರಾಣೆ (ಕಾರವಾರ).—ಮಾನ್ಯ ಕಂದಾಯ ಮತ್ತು ಯೋಜನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುತಕರೇ:—

ಕಾರವಾರ ಜಿಲ್ಲೆಯ ಸೂಪಾ ತಾಲ್ಲೂಕಿನಲ್ಲಿ ಕಂದಾಯ ಇಲಾಖೆಯ ಭೂಮಿಯನ್ನು ಅನಧಿಕೃತವಾಗಿ ಬೇಸಾಯ ಮಾಡುತ್ತಿರುವವರ ಸಂಖ್ಯೆ ಎಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಸಚಿವರು).—

೩೭ (ಮೂವತ್ತೇಳು ಜನ ಮಾತ್ರ).

ಶ್ರೀ ಪಿ. ಎಸ್. ರಾಣೆ.—ಸ್ವಾಮಿ, ನಾನು ಈ ಪ್ರಶ್ನೆಯಲ್ಲಿಯೇ ಮೂರು ಉಪ ಪ್ರಶ್ನೆಗಳನ್ನು ಕೇಳಿದ್ದೆ. ಆದರೆ, ಒಂದು ಮಾತ್ರ ಬಂದಿದೆ. ಆದ್ದರಿಂದ ನನಗೆ ಹೆಚ್ಚು ಸಪ್ಲಿಮೆಂಟರಿ ಕೇಳುವುದಕ್ಕೆ ಅವಕಾಶ ಕೊಡಬೇಕು. ಸೂಪಾ ತಾಲ್ಲೂಕಿನಲ್ಲಿ ಯಾವ ಯಾವ ಭಾಗಗಳಲ್ಲಿ ಅನಧಿಕೃತವಾಗಿ ಬೇಸಾಯ ನಡೆಯುತ್ತಿದೆ. ಎಷ್ಟು ವರ್ಷಗಳಿಂದ ನಡೆಯುತ್ತಿದೆ ? ಎಷ್ಟು ಜನ ಮಾಡುತ್ತಿದ್ದಾರೆಂಬುದನ್ನು ಮಾನ್ಯ ಮಂತ್ರಿಯವರು ತಿಳಿಸಬೇಕು.

ಶ್ರೀ ವೀರಣ್ಣ.—ಮಾನ್ಯ ಅಧ್ಯಕ್ಷರೆ, ಸೂಪಾ ತಾಲ್ಲೂಕಿನಲ್ಲಿ ೧-೪-೮೫ರವರೆಗೆ ಒಟ್ಟು ೩೭ ಜನ ಕಂದಾಯ ಇಲಾಖೆಯ ಜಮೀನಿನಲ್ಲಿ ಅನಧಿಕೃತ ಸಾಗುವಳಿ ಮಾಡುತ್ತಿದ್ದರು. ಅನಧಿಕೃತ ಅಕ್ರಮಣದಾರರ ಪೈಕಿ ೨೮ಜನರು ಸಕ್ರಮಗೊಳಿಸುವ ಅರ್ಹತೆಯನ್ನು ಪಡೆದಿದ್ದಾರೆ. ಇವರಿಗೆ ಸುಮಾರು ೧೩ ಎಕರೆ ೮೧ಗುಂಟೆ ಜಮೀನನ್ನು ಸಕ್ರಮಗೊಳಿಸಿ ಕೊಡಲಾಗಿದೆ. ಉಳಿದ ೯ ಜನರು ಮಾಡುತ್ತಿದ್ದ ಅನಧಿಕೃತ ಜಮೀನು ಒಟ್ಟು ೨೫ ಎಕರೆ ೩೧ ಗುಂಟೆಯನ್ನು ಅರ್ಹತೆ ಪಡೆಯದ ಕಾರಣ ೧-೪-೮೧ರಲ್ಲಿ ಖುಲ್ಲಾ ಪಡಿಸಲಾಗಿದೆ.

ಶ್ರೀ ಪಿ. ಎಸ್. ರಾಣೆ.—ಸ್ವಾಮಿ, ಅಧಿಕಾರಿಗಳು ಸರಿಯಾದ ಮಾಹಿತಿಯನ್ನು ಕೊಟ್ಟಿಲ್ಲ. ಸೂಪಾ ತಾಲ್ಲೂಕು ಪೂರ್ಣವಾಗಿ ಅರಣ್ಯಪ್ರದೇಶದಿಂದ ಕೂಡಿದೆ. ಅಲ್ಲಿ ಕಂದಾಯ ಇಲಾಖೆಗೆ ಸೇರಿದ ಜಮೀನು ಇರುವುದೇ ಕಡಿಮೆ. ಜೀವನದ ಸಲುವಾಗಿ ಕಳೆದ ೨೦-೩೦ ವರ್ಷಗಳಿಂದಲೂ ಅನಧಿಕೃತವಾಗಿ ಬೇಸಾಯ ಮಾಡಿಕೊಂಡು ಬರುತ್ತಿದ್ದಾರೆ. ಅರ್ಹತೆ ಇಲ್ಲ ಎನ್ನುವ ಕಾರಣ ಕೊಡುವ ಬದಲು, ಸಕ್ರಮಗೊಳಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ವೀರಣ್ಣ.—ಇದರ ಬಗ್ಗೆ ಜಂಟಿ ಸಲಹಾ ಸಮಿತಿಯವರು ವರದಿಯನ್ನು ಕೊಟ್ಟಿದ್ದಾರೆ. ಈ ಅಧಿವೇಶನ ಅಥವಾ ಮುಂದಿನ ಅಧಿವೇಶನದಲ್ಲಿ ಲ್ಯಾಂಡ್ ರೆವಿನ್ಯೂ ಆಕ್ಟಿಗೆ ತಿದ್ದುಪಡಿ ತರುತ್ತೇವೆ. ಅದು ಬಂದಮೇಲೆ ಅದರ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು.—ಪ್ರಶ್ನೆ ೧೭೫, ಮಾನ್ಯ ಯಂಕಾನಾಯಕ್‌ರವರೆ ತಮ್ಮ ಪ್ರಶ್ನೆ ಮುಂದೆ ಹೋಗಿದೆ. ನಾನು ಆನಂತರ ಉತ್ತರ ತರಿಸಿಕೊಡುತ್ತೇನೆ.

ಶ್ರೀ ಬಿ. ಹೆಚ್. ಯಂಕಾನಾಯಕ್.—ಅಧ್ಯಕ್ಷರೇ, ಹಾಗಾದರೆ ನಾವು ಪ್ರಶ್ನೆ ಕೇಳುವುದು ಏತಕ್ಕೆ ?

(ಗೊಂದಲ)

ಅಧ್ಯಕ್ಷರು.—ಕೆಲವು ಸಾರಿ ಅನಿವಾರ್ಯ ಕಾರಣಗಳಿಂದ ಮುಂದೆ ಹೋಗುತ್ತದೆ. ನಾನು ಉತ್ತರ ತರಿಸಿಕೊಡುತ್ತೇನೆ ದಯವಿಟ್ಟು ತಾವು ಕುಳಿತುಕೊಳ್ಳಬೇಕು. ಈಗ ಪ್ರಶ್ನೆ ೨೩೭ ಮಾನ್ಯ ವಲ್ಲಾರಿಗೌಡ ಎಸ್. ಪಾಟೀಲ್, ಅವರ ಪ್ರಶ್ನೆಗೂ ಉತ್ತರ ಬಂದಿಲ್ಲದೇ ಇರುವುದರಿಂದ ಅವರ ಪ್ರಶ್ನೆಗೂ ನಾನು ಉತ್ತರ ತರಿಸಿಕೊಡುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಅಧ್ಯಕ್ಷರೆ, ನಾವು ಪ್ರಶ್ನೆ ಕೇಳಿದ ಮೇಲೆ ಉತ್ತರ ಬರಲಿಲ್ಲ ಎಂದರೆ ಹೇಗೆ ?

(ಗೊಂದಲ)

ಅಧ್ಯಕ್ಷರು.—ಹಿಂದೆ ತಾವು ಊರಿಗೆ ಹೋದನಂತರ ಉತ್ತರ ಬಂದಂಥವುಗಳನ್ನು ತಮ್ಮ ಊರಿಗೆ ಕಳುಹಿಸಿಕೊಟ್ಟಿದ್ದೇವೆ. ನಾವು ಉತ್ತರ ಕಳುಹಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಅನಿವಾರ್ಯ ಕಾರಣಗಳಿಂದ ಈ ರೀತಿ ಆಗುತ್ತದೆ.

ಶ್ರೀ ಎಂ. ರಾಮಪ್ಪ.—ಅಧ್ಯಕ್ಷರೆ, ನಾವು ಊರಿಗೆ ಹೋದಮೇಲೆ ಉತ್ತರ ಕಳುಹಿಸಿಕೊಟ್ಟರೆ ಏನೂ ಪ್ರಯೋಜನ ಆಗುವುದಿಲ್ಲ. ಅಧಿವೇಶನ ನಡೆಯುವಾಗ ಇಲ್ಲಿಗೆ ಉತ್ತರ ತರಿಸಿಕೊಟ್ಟರೆ ನಾವು ಪ್ರಶ್ನೆ ಕೇಳಲಿಕ್ಕೆ ಅನುಕೂಲವಾಗುತ್ತದೆ.

(ಗೊಂದಲ)

ಅಧ್ಯಕ್ಷರು.—ಈ ಅಧಿವೇಶನ ಸಮಯದೊಳಗೆ ಬರಲಿಲ್ಲ ಅಂದರೂ ಅನಂತರವಾದರೂ ಉತ್ತರವನ್ನು ತಮ್ಮ ಊರಿಗೆ ಕಳುಹಿಸಿಕೊಡುತ್ತೇವೆ ದಯವಾಡಿ ಕುಳಿತುಕೊಳ್ಳಬೇಕು.

ಶ್ರೀ ಬಿ. ಹೆಚ್. ಯಂಕಾನಾಯಕ್.—ಈ ರೀತಿ ಆದರೆ ನಾನು ವಾಕ್‌ಔಟ್ ಮಾಡುತ್ತೇನೆ.

(ಮಾನ್ಯ ಸದಸ್ಯರು ತಮ್ಮ ಪೀಠದಿಂದ ಎದ್ದು ಅಧ್ಯಕ್ಷರ ಮುಂಭಾಗದಲ್ಲಿರುವ ಜಾಗದಲ್ಲಿ ಬಂದು ನಿಂತರು)

(ಗೊಂದಲ)

ಅಧ್ಯಕ್ಷರು.—ದಯವಾಡಿ ತಾವು ತಮ್ಮ ಸ್ಥಳಕ್ಕೆ ಹೋಗಿ ಕುಳಿತುಕೊಳ್ಳಬೇಕು. ನೀವು ಊರಿಗೆ ಹೋಗುವ ಹೊತ್ತಿಗೆ ನಾನು ಉತ್ತರ ತರಿಸಿಕೊಡುತ್ತೇನೆ.

ಶ್ರೀ ಆರ್. ಎಸ್. ನಾಯಕ್.—ಅಧ್ಯಕ್ಷರೆ, ತಾವು ಈ ರೀತಿ ಹೇಳಿದರೆ ಹೇಗೆ ?

(ಗೊಂದಲ)

ಅಧ್ಯಕ್ಷರು.—ಏತಕ್ಕೆ ಲೇಟ್ ಆಗಿದೆ ಎನ್ನುವುದು ಹೇಳುತ್ತೇನೆ ದಯವಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

ಶ್ರೀ ಗೋಪಾಲಮುಕುಂದ ಕಾನಡೆ.—ಅಧ್ಯಕ್ಷರೆ, ಏನಾದರೂ ಒಳ್ಳೆಯ ವಿಷಯ ಇದ್ದರೆ ಮುಂದೆ ಹಾಕುತ್ತೇನೆಂದು ಹೇಳುತ್ತೀರ? ತಾವು ಇಂತಹ ಸಂದರ್ಭದಲ್ಲಿ ನಮ್ಮ ರಕ್ಷಣೆಗೆ ಬರಬೇಕು.

(ಗೊಂದಲ)

ಶ್ರೀ ವೀರಣ್ಣ.—ಮಾನ್ಯ ಯಂಕಾನಾಯಕ್‌ರವರೇ, ದಯವಾಡಿ ನಮ್ಮ ಛೇಂಬರ್‌ಗೆ ಬನ್ನಿ, ನಾನು ಉತ್ತರ ತರಿಸಿಕೊಡುತ್ತೇನೆ.

(ಗೊಂದಲ)

ಅಧ್ಯಕ್ಷರು.—ಸ್ವಲ್ಪ ಸಮಯ ಕೊಡಿ ಎಂದು ಪತ್ರ ಬರೆದಿದ್ದಾರೆ. ತಮಗೆ ನಾನು ಉತ್ತರ ತರಿಸಿಕೊಡುತ್ತೇನೆ. ದಯವಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಎಂ. ರಾಮಪ್ಪ.—ಇಲ್ಲಿ ಸಭೆ ನಡೆಯುವುದರಿಂದ ಒಂದು ಗಂಟೆಗೆ ೪೦-೫೦ ಸಾವಿರ ರೂಪಾಯಿಗಳ ಖರ್ಚು ಬರುತ್ತದೆ ಎಂದು ಹೇಳುವಾಗ ಉತ್ತರಗಳು ಬರದೇ ಇದ್ದರೆ ಹೇಗೆ?

(ಗೊಂದಲ)

MR. SPEAKER.—Hon. Minister for Parliamentary Affairs must have control over your officers. Take action against an officer who does not send replies to the questions. Keep such officers under suspension for dereliction of their duty. I do support the view expressed by the hon. Member on the opposition.

ಪ್ರೊ|| ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ಬೇಗ ಉತ್ತರ ತರಿಸಿಕೊಡುತ್ತೇವೆ.

ಹಿಂದುಳಿದ ಸಂಘದವರಿಗೆ ಜಮೀನನ್ನು ನಿವೇಶನಕ್ಕಾಗಿ ಮಂಜೂರು ಮಾಡಿರುವ ಬಗ್ಗೆ

೮೮ (೩೭೨) ಶ್ರೀ ಕೆ.ಬಿ. ಶಾಣಪ್ಪ (ಶಹಬಾದ್).—ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಹುಮನಾಬಾದ್ ಪಟ್ಟಣದ ನೀರಿನ ಟ್ಯಾಂಕಿನ ಹತ್ತಿರ ಸರ್ಕಾರಕ್ಕೆ ಸೇರಿದ ೪ ಎಕರೆ ಜಮೀನನ್ನು ಜಿಲ್ಲಾಧಿಕಾರಿಗಳು ಹಿಂದುಳಿದ ಸಂಘದವರಿಗೆ ನಿವೇಶನಕ್ಕಾಗಿ ಮಂಜೂರು ಮಾಡಿರುವುದು ನಿಜವೇ?

ಆ) ಸದರಿ ಸಂಘದ ಸದಸ್ಯರ ಹೆಸರು ಮತ್ತು ಸಂಖ್ಯೆ ಎಷ್ಟು?

ಇ) ಸದರಿ ಸಂಘದಲ್ಲಿ ಕೆಲವೇ ಶ್ರೀಮಂತ ಹಾಗೂ ಅವರ ಸಂಬಂಧಿಕರು ಈ ಸಂಘದ ಸದಸ್ಯರಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಈ) ಸದರಿ ಸಂಘದಲ್ಲಿನ ಕೆಲವು ಸದಸ್ಯರು ನಿವೇಶನಗಳನ್ನು ಈಗಾಗಲೇ ಬೇರೆಯವರಿಗೆ ಮಾರಾಟ ಮಾಡಿ ಸಾಕಷ್ಟು ಹಣ ಪಡೆದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಉ) ಸದರಿ ಜಮೀನಿನಲ್ಲಿ ಈಗ್ಗೆ ಸಾಕಷ್ಟು ವರ್ಷಗಳಿಂದ ಹಿಂದುಳಿದ ಹಾಗೂ ಹರಿಜನ-ಗಿರಿಜನ ಕುಟುಂಬಕ್ಕೆ ಸೇರಿದವರು ಗುಡಿಸಲು ಹಾಕಿಕೊಂಡು ವಾಸವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿಗಳು).—

ಅ) ಹೌದು.

ಆ) ಪಟ್ಟಿಯನ್ನು ಲಗತ್ತಿಸಿದೆ—ಸದಸ್ಯರ ಸಂಖ್ಯೆ ೬೦.

ಇ) ಇಲ್ಲ.

ಈ) ಇಲ್ಲ.

ಉ) ಹೌದು.

List of the members of the Backward Class Housing Co-operative Society, Humnabad is as follows:—

Name

1) Subhash Mati Rao Astikar
2) Tulsiram Mati Rao
3) Nimala Subhash
4) Vivekanand Manik Rao Doijade
5) Manohar Rao Mahendraker
6) Ramachander Gopal Rao